## ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು): ದಿನಾಂಕ 22-3-94ರ ಲಿಖಿತ ಮೂಲಕ ಉತ್ತರಿಸುವ 10ನೇ ಪಟ್ಟಿಯಲ್ಲಿರುವ 20 ಪ್ರಶ್ನೆಗಳ ಪೈಕಿ 512, 507 ಮತ್ತು 524 ಹೊರತು ಪಡಿಸಿ ಇನ್ನುಳಿದ 17 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ತಮ್ಮ ಮುಂದಿಡುತ್ತೇನೆ. ದಿನಾಂಕ 18-2-94ರ ವಿಧಾನ ಸಭೆಯ ಅಧಿವೇಶನ ರದ್ದಾದ ಕಾರಣ ಆ ದಿನದ 9ನೇ ಪಟ್ಟಿಯ, 20 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳ ಉತ್ತರಗಳನ್ನು ಚುಕ್ಕೆ ಗುರುತಿಲ್ಲದ 39 ಪ್ರಶ್ನೆಗಳ ಪೈಕಿ 31 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡಬಯಸುತ್ತೇನೆ.

**ನೂತನ ಕೈಗಾರಿಕಾ ನೀತಿಯಲ್ಲಿನ ಉತ್ತೇಜನ ಮತ್ತು ರಿಯಾಯಿತಿಗಳ ಬಗ್ಗೆ**

523 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜಿರಾದ್): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ಕೈಗಾರಿಕಾ ನೀತಿ ಮತ್ತು ಉತ್ತೇಜನಗಳು ಹಾಗೂ ರಿಯಾಯಿತಿ (1993-94)ಗಳನ್ನು ಯಾವಾಗ ಪ್ರಕಟಿಸಲಾಯಿತು.*

*ಆ) ಈ ನೀತಿಯನ್ವಯ ಬೆಂಗಳೂರು ನಗರ ಪ್ರದೇಶದಲ್ಲಿ (ಅಭಿವೃದ್ಧಿ ಹೊಂದಿದ ಪ್ರದೇಶ ವಲಯ-1) ಮಹಿಳೆಯರು ಜಂಟಿ ಪಾಲುದಾರಿಕೆಯಲ್ಲಿ ವಿಶೇಷ ವರ್ಗದಲ್ಲಿ ಬರುವ (ಥ್ರಸ್ಟ್ ಸೆಕ್ಟರ್) ಸಿದ್ಧ ಉಡುಪುಗಳ (ಗಾರ್ಮೆಂಟ್ಸ್) ಘಟಕಗಳನ್ನು ಸುಮಾರು 15 ಲಕ್ಷ ರೂ.ಗಳ ಬಂಡವಾಳದಲ್ಲಿ (ಕೆ.ಎಸ್.ಎಫ್.ಸಿ. ಮೂಲಕ) ಪ್ರಾರಂಭಿಸಿದಲ್ಲಿ ಅಂತಹವರಿಗೆ ಮೇಲ್ಕಂಡ ನೂತನ ಕೈಗಾರಿಕಾ ನೀತಿಯಲ್ಲಿ ಯಾವ ಯಾವ ರಿಯಾಯಿತಿ ಹಾಗೂ ಉತ್ತೇಜನಗಳನ್ನು ನೀಡಲಾಗುವುದು; (ಉತ್ತೇಜನ ಹಾಗೂ ರಿಯಾಯಿತಿಗಳ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು).*

*ಇ) ಇಂತಹ ಘಟಕಗಳಿಗೆ ನೀಡಲಾಗುವ ಸಬ್ಸಿಡಿಯ ಮೊತ್ತವೆಷ್ಟು ಮತ್ತು ತೆರಿಗೆ ರಿಯಾಯಿತಿಯ ಮೊತ್ತವೆಷ್ಟು ಹಾಗೂ ಎಷ್ಟು ಅವಧಿಯವರೆಗೆ ತೆರಿಗೆ ರಿಯಾಯಿತಿ ನೀಡಲಾಗುವುದು;*

*ಈ) ಈ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆಯೇ;*

*ಉ) ಹಾಗಿದ್ದಲ್ಲಿ, ಯಾವಾಗ ಹೊರಡಿಸಲಾಗಿದೆ (ವಿವರಗಳನ್ನು ನೀಡುವುದು);*

ಶ್ರೀ ರಾಮಲಿಂಗ ರೆಡ್ಡಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು): ಅ) 1993ರ ಪರಿಷ್ಕೃತ ಕೈಗಾರಿಕಾ ನೀತಿ ಹಾಗೂ ಪ್ರೋತ್ಸಾಹ ಕ್ರಮಗಳು ಹಾಗೂ ರಿಯಾಯಿತಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಸಿಐ 140 ಎನ್ಎಸ್ಐ 93, ದಿ: 12-7-93ರಲ್ಲಿ ಪ್ರಕಟಿಸಲಾಗಿದೆ.

ಆ) ಪರಿಷ್ಕೃತ 1993ರ ಕೈಗಾರಿಕಾ ಮತ್ತು ರಿಯಾಯಿತಿಗಳ ಅಡಿಯಲ್ಲಿ ವಲಯ-1ರಲ್ಲಿ ಅಂದರೆ ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರ ತಾಲ್ಲೂಕು ಹಾಗೂ ಬೆಂಗಳೂರು ನಗರವೂ ಸೇರಿದಂತೆ ಪ್ರದೇಶದಲ್ಲಿ ಸಿದ್ಧ ಉಡುಪುಗಳ (ರೆಡಿಮೇಡ್ ಗಾರ್ಮೆಂಟ್ಸ್) ಸೇರಿದಂತೆ ಐದು ಚಟುವಟಿಕೆಗಳಿಗೆ ಮಾತ್ರ ರಿಯಾಯಿತಿಗಳನ್ನು ನೀಡಲಾಗುವುದು. ಈ ಸಿದ್ಧ ಉಡುಪು ತಯಾರಿಸುವ ಸಣ್ಣ ಕೈಗಾರಿಕೆಗಳಿಗೆ ಶೇ.25 ರಷ್ಟು ಬಂಡವಾಳದ (ಜಮೀನು ಕಟ್ಟಡ ಹಾಗೂ ಯಂತ್ರೋಪಕರಣಗಳು) ಮೇಲೆ ಸಹಾಯಧನ ಹಾಗೂ ಪ್ರಥಮ 4 ವರ್ಷಗಳ ಅವಧಿಗೆ ತೆರಿಗೆ ವಿನಾಯಿತಿ ಅಥವಾ 6 ವರ್ಷಗಳ ಕಾಲ ತೆರಿಗೆ ಮುಂದೂಡುವಿಕೆ ಸೌಲಭ್ಯವನ್ನು ನೀಡಲಾಗುವುದು.